

بسم اللهِ الرّحمٰن الرّحيم

# ಜಪಾನ್‌ನಲ್ಲಿ ಅಹ್ಮದಿಯಾ ಮಸ್‌ಜಿದ್ – ಜಪಾನೀಯರ ಪ್ರತಿಕ್ರಿಯೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **27–11–2015** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ನಿಮಗೆ ತಿಳಿದಿರುವ ಹಾಗೆ ಕಳೆದ ಕೆಲವು ದಿನಗಳಲ್ಲಿ ನಾನು ಜಪಾನಿಗೆ ಅಲ್ಲಿನ ಪ್ರಥಮ ಮಸ್‌ಜಿದನ್ನು ಉದ್ಘಾಟಿಸಲು ಹೋಗಿದ್ದೆ. ಅಲ್ಲಿನ ಬಾಹ್ಯ ಸ್ಥಿತಿಯನ್ನು ನೋಡಿದರೆ ಅಲ್ಲಿ ಮಸ್‌ಜಿದ್ ನಿರ್ಮಿಸುವುದು ಬಹಳ ಕಷ್ಟಕರವಾಗಿತ್ತು. ಅಲ್ಲಿನ ನಮ್ಮ ವಕೀಲರು ಜಾಪಾನಿ ವಂಶಜರಾಗಿದ್ದಾರೆ. ಅವರು ಹೇಳಿದರು– ಮಸ್‌ಜಿದ್ ನಿರ್ಮಾಣ ಪೂರ್ಣಗೊಂಡ ಬಗ್ಗೆ ತಮಗೆ ಶುಭಾಶಯಗಳು. ಆದರೆ ನಾನು ಈಗಲೂ ಯೋಚಿಸುತ್ತೇನೆ, ನನಗೆ ಆಶ್ಚರ್ಯವಾಗುತ್ತದೆ– ಈ ಪ್ರದೇಶದಲ್ಲಿ ತಮಗೆ ಮಸ್‌ಜಿದ್ ನಿರ್ಮಿಸಲು ಅನುಮತಿ ದೊರೆತ ಬಗ್ಗೆ. ನಾನು ತಮಗೋಸ್ಕರ ವಾದಿಸುತ್ತಿದ್ದೆ ಆದರೆ ಜಯಗಳಿಸುವ ಯಾವ ಪ್ರತೀಕ್ಷೆಯೂ ನನಗೆ ಇರಲಿಲ್ಲ. ನಾನು ಒಮ್ಮೆ ಜಮಾಅತಿನ ಆಡಳಿತ ಮಂಡಳಿಗೆ ಹೇಳಿದ್ದೆ, ನೀವು ಈ ಯೋಜನೆ ಬಿಟ್ಟುಬಿಡುವುದು ಉತ್ತಮವೆಂದು. ಆದರೆ ಜಮಾಅತಿನ ಜನರ ಭರವಸೆ ಅದ್ಭುತಕರವಾಗಿತ್ತು. ಅವರು ಹೇಳಿದರು: ನೀವು ಪ್ರಯತ್ನ ಮಾಡಿರಿ. ಇನ್‌ಶಾಅಲ್ಲಾಹ್– ನಮಗೆ ಈ ಸ್ಥಳ ಸಿಗುವುದು ಮತ್ತು ಇಲ್ಲಿ ಮಸ್‌ಜಿದ್ ನಿರ್ಮಿಸಲು ಅನುಮತಿ ಸಹ ಲಭಿಸುವುದು. ಈ ಮಸ್‌ಜಿದ್ ಇಲ್ಲಿ ನಿರ್ಮಾಣವಾದುದು ನನಗೆ ಬಹಳ ಆಶ್ಚರ್ಯಕರವಾಗಿ ಕಾಣುತ್ತದೆ ಮತ್ತು ಇದು ಒಂದು ದೃಷ್ಟಾಂತವಾಗಿದೆ ಎಂದು ಹೇಳಿದರು.

ಇದು ಅಲ್ಲಾಹನು ನೀಡಿದ ಅನುಗ್ರಹವಾಗಿದೆ. ಅವನು ಪ್ರತಿಯೊಂದು ಸಂದರ್ಭದಲ್ಲಿಯೂ ಜಮಾಅತಿಗೆ ಅನುಗ್ರಹ ನೀಡುತ್ತಾನೆ ಮತ್ತು ನಮ್ಮ ವಿಶ್ವಾಸ ವರ್ಧಿಸುತ್ತಾನೆ. ಪ್ರತಿಯೊಂದು ಕೆಲಸಕ್ಕೆ ಅಲ್ಲಾಹನು ಪ್ರತ್ಯೇಕ ಸಮಯ ನಿಗದಿ ಪಡಿಸಿದ್ದಾನೆ. ಆ ಸಮಯ ಬಂದಾಗ ಅಲ್ಲಾಹನ ಅನುಗ್ರಹದಿಂದ ಆ ಕೆಲಸ ಆಗುತ್ತದೆ. ಅಲ್ಲಾಹನು ಇಲ್ಲಿ ಮಸ್‌ಜಿದ್ ನಿರ್ಮಾಣವಾಗಬೇಕೆಂದು ಇಚ್ಛಿಸಿದಾಗ ಎಲ್ಲ ಅಡ್ಡಿ ಆತಂತಕಗಳಿದ್ದರೂ ಮಸ್‌ಜಿದ್ ನಿರ್ಮಿಸುವ ಭಾಗ್ಯವನ್ನು ಅಲ್ಲಾಹನು ನಮಗೆ ನೀಡಿದನು. ಹಾಗೆ ಇಸ್ಲಾಮ್ ಧರ್ಮದ ಸಂದೇಶ ತಲಪಿಸುವ ಪ್ರಥಮ ಕೇಂದ್ರ ಈ ದೇಶದಲ್ಲಿ ಸ್ಥಾಪಿತವಾಯಿತು. ಒಂದು ಮಸ್‌ಜಿದ್ ಅಥವಾ ಒಂದು ಕೇಂದ್ರ ದೇಶದಾದ್ಯಂತ ಇಸ್ಲಾಮಿನ ಉಪದೇಶಗಳನ್ನು ಹರಡುವ ಉದ್ದೇಶ ಈಡೇರಿಸಲು ಸಾಕಾಗಲಾರದು ಎನ್ನುವುದರ ಬಗ್ಗೆ ಸಂಶಯವಿಲ್ಲ. ಆದರೆ ಒಂದು ವಿಷಯವಂತೂ ಸತ್ಯ– ಇಸ್ಲಾಮಿನ ವಾಸ್ತವಿಕ ಉಪದೇಶ ಜಪಾನಿಗೆ ತಲಪಿಸುವುದಕ್ಕೆ ಅಸ್ತಿಭಾರ ಹಾಕಲಾಗಿದೆ ಎಂಬುದು. ನಾನು ಕೆಲವು ಜನರ ಅಭಿಪ್ರಾಯಗಳನ್ನು ಪ್ರಸ್ತಾಪಿಸುವೆನು. ಅವುಗಳಿಂದ ಅಹ್ಮದಿಯಾ ಜಮಾಅತ್ ಮೂಲಕ ಅವರಿಗೆ ತಿಳಿಸಲಾದ ಇಸ್ಲಾಮಿನ ಉಪದೇಶಗಳನ್ನು ಅವರು ಯಾವ ರೀತಿಯಲ್ಲಿ ನೋಡುತ್ತಾರೆಂದು ತಿಳಿಯುತ್ತದೆ. ಇದು ಹೀಗೆಯೇ ಆಗಬೇಕಿತ್ತು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸತ್ಯಸಂಧನಾದ ದಾಸನ ಮೂಲಕವೇ ಇದು ಸಾಧ್ಯವಾಗಬೇಕಾಗಿತ್ತು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಉಳಿದ ದೇಶಗಳಿಗೆ ಯಥಾರ್ಥ ಇಸ್ಲಾಮಿನ ಉಪದೇಶಗಳನ್ನು ತಲಪಿಸಲು ಅಭಿಲಾಷೆ ಸೂಚಿಸಿದ ಹಾಗೆ ಮತ್ತು ಅದಕ್ಕೋಸ್ಕರ ಪ್ರಯತ್ನ ಸಹ ಮಾಡಿದ ಹಾಗೆ ಜಪಾನಿನ ಬಗ್ಗೆ ಸಹ ಹೇಳಿದ್ದರು: ಜಪಾನಿನ ಜನರಿಗೆ ಇಸ್ಲಾಮಿನ ಸಂದೇಶ ತಲಪಿಸಲು ಒಂದು ಪುಸ್ತಕ ಬರೆಯಬೇಕೆಂದೂ ಒಂದು ಸಾವಿರ ರೂಪಾಯಿ ಕೊಟ್ಟಾದರೂ ಅದನ್ನು ಒಬ್ಬ ವಿದ್ವಾಂಸನಾದ ಜಪಾನೀಯನಿಂದ ಭಾಷಾಂತರಿಸಬೇಕೆಂದೂ ಹಾಗೂ ಅದರ ಹತ್ತು ಸಾವಿರ ಪ್ರತಿಗಳನ್ನು ಮುದ್ರಿಸಿ ಜಪಾನಿನಲ್ಲಿ ಪ್ರಕಟಿಸಬೇಕು ಎಂದು ಹೇಳಿದರು. ಜಪಾನಿನ ಸಾತ್ವಿಕರಾದ ಜನರು ಅಹ್ಮದಿಯತ್ತನ್ನು ಅಂಗೀಕರಿಸುವರು ಎಂದು ಸಹ ಅವರು ಹೇಳಿದ್ದರು. ಅಲ್‌ಹಮ್‌ದುಲಿಲ್ಲಾಹ್– ಈಗ ಪವಿತ್ರ ಖುರ್‌ಆನಿನ ಜಪಾನಿ ಭಾಷಾಂತರ ಸಹಿತ ಸಾವಿರಾರು ಸಂಖ್ಯೆಯಲ್ಲಿ ಜಪಾನಿಯರಿಗೋಸ್ಕರ ಜಪಾನಿ ಭಾಷೆಯಲ್ಲಿ ಸಾಹಿತ್ಯಗಳನ್ನು ಜಮಾಅತ್ ಸಿದ್ಧಪಡಿಸುತ್ತಾ ಇದೆ. ಈಗ ಈ ಮಸ್‌ಜಿದ್ ನಿರ್ಮಾಣದ ಮೂಲಕ ಅಲ್ಲಾಹನು ಎಂತಹ ಬಾಗಿಲುಗಳನ್ನು ತೆರೆದಿರುವನೆಂದರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಇಚ್ಛೆ ಈಡೇರಿಸುವ ರೀತಿಯಲ್ಲಿ ಕೋಟಿಗಟ್ಟಲೆ ಜನರಿಗೆ ಇಸ್ಲಾಮಿನ ಸಂದೇಶ ತಲಪುತ್ತಿದೆ.

ನಾನು ಹೇಳಿದಂತೆ ಇಲ್ಲಿನ ಜನರ ಅಭಿಪ್ರಾಯಗಳನ್ನು ವಿವರಿಸುವೆನು. ಇಸ್ಲಾಮಿನ ಬಗ್ಗೆ ಅವರ ಅಭಿಪ್ರಾಯ ಬದಲಾಗಿದೆ. ಮೊದಲು ಬೇರೆ ಅಭಿಪ್ರಾಯ ಹೊಂದಿದ್ದರು. ಈಗ ಅಭಿಪ್ರಾಯ ಬದಲಾವಣೆ ಹೊಂದಿದೆ. ಈಗ ಹಿಂದೆ ಇದ್ದುದಕ್ಕಿಂತ ಬೇರೆಯಾದ ಅಭಿಪ್ರಾಯ ಹೊಂದಿದ್ದಾರೆ. ಮಸ್‌ಜಿದ್ ಉದ್ಘಾಟನೆಯಲ್ಲಿ ಭಾಗವಹಿಸಿ ನಮಗೆ ಇಸ್ಲಾಮಿನ ತತ್ವಗಳು ತಿಳಿದುವು, ಈಗ ಇಸ್ಲಾಮಿನ ಬಗ್ಗೆ ನಮ್ಮ ತಪ್ಪು ಗ್ರಹಿಕೆಗಳು ನಿವಾರಣೆಯಾಗಿದೆ ಎಂದು ಅವರು ಹೇಳಿದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದ್ದರು– ಇಸ್ಲಾಮ್ ಧರ್ಮದ ಪರಿಚಯ ಮಾಡಿಕೊಡಬೇಕೆಂದಿದ್ದರೆ ಮೊದಲು ಮಸ್‌ಜಿದ್ ನಿರ್ಮಿಸಿರಿ. ಆಗ ಜನರು ಇಸ್ಲಾಮ್ ಬಗ್ಗೆ ಶ್ರದ್ಧೆ ನೀಡುವರು. ಈ ಮಾತು ಬಹಳ ಭವ್ಯವಾಗಿ ಈಡೇರಿರುವುದು ನಮಗೆ ಪ್ರತಿಯೊಂದು ಸ್ಥಳದಲ್ಲಿ ಕಾಣಿಸುತ್ತದೆ. ಜನರ ಅಭಿಪ್ರಾಯ ಯಾವ ರೀತಿ ಬದಲಾವಣೆಗೊಂಡಿತು ಎಂಬುದನ್ನು ನೋಡುವಾಗ ಆಶ್ಚರ್ಯವಾಗುತ್ತದೆ. ಜುಮುಅ ದಿನ ಜಪಾನಿ ಅತಿಥಿಗಳು ಮಸ್‌ಜಿದ್‌ಗೆ ಬಂದಿದ್ದರು. ಮೊದಲು ಪರದೆ ಹಾಕಲಾಗಿತ್ತು. ಕೆಲವರು ಹೊರಗೆ ನಿಂತಿದ್ದರು. ಅವರು ಅನಂತರ ಒಳಗೆ ಬಂದು ಕುಳಿತರು. ಖುತ್‌ಬ ಆಲಿಸಿದರು. ನಾವು ನಮಾಝ್ ಮಾಡುವುದನ್ನು ಸಹ ನೋಡಿದರು. ಅಂದಾಜು 49–50 ಜಪಾನಿ ಅತಿಥಿಗಳು ಖುತ್‌ಬ ಆಲಿಸಿದರು. ಅವರಲ್ಲಿ ಶಿಂಟೋಯಿಸಮ್ ಪಂಥದವರು, ಬೌದ್ಧರು ಮತ್ತು ಕ್ರೈಸ್ತರಲ್ಲದೆ ಈ ಪ್ರದೇಶದ ಪಾರ್ಲಿಮೆಂಟ್ ಸದಸ್ಯರು, ಪ್ರೊಫೆಸರ್‌ಗಳು ಮತ್ತು ಬೇರೆ ವಿಭಾಗದ ಜನರು ಸಹ ಸೇರಿದ್ದರು. ಅವರಲ್ಲಿ ಕೆಲವರ ಅಭಿಪ್ರಾಯಗಳನ್ನು ನಾನು ವಿವರಿಸುತ್ತೇನೆ.

* ಒಸಾಮು ಎಂಬವರು ಚರ್ಚ್ ಆಫ್ ಜೀಸಸ್ ಕ್ರೈಸ್ಟ್ ಇದರ ಡೈರೆಕ್ಟರ್ ಆಫ್ ಪಬ್ಲಿಕ್ ಎಫೇರ್ಸ್ ಆಗಿದ್ದಾರೆ. ಅವರು ಹೇಳುತ್ತಾರೆ– ಈ ಮಸ್‌ಜಿದ್ ಜಪಾನಿ ಜನರ ಮತ್ತು ಇಸ್ಲಾಮಿನ ಮಧ್ಯೆ ಒಂದು ಸೇತುವೆಯಾಗಿ ಕಾರ್ಯ ನಿರ್ವಹಿಸುವುದೆಂದು ನನಗೆ ನಂಬಿಕೆಯಿದೆ.

* ಒಬ್ಬ ಬೌದ್ಧ ಸನ್ಯಾಸಿ ತಾಯಿಜುನ್ ಸಾತೋ ಎಂಬವರು ಹೀಗೆ ಹೇಳಿದರು: ಒಬ್ಬ ಬೌದ್ಧ ಮತಾವಲಂಬಿಯಾದ ನನಗೆ ಮಸ್‌ಜಿದ್‌ನೊಳಗೆ ಪ್ರವೇಶಿಸಿ ಸಂತೋಷವಾಯಿತು. ಮುಸ್ಲಿಮೇತರರು ಮತ್ತು ಬೌದ್ಧರು ಮಸ್‌ಜಿದ್‌ಗೆ ಪ್ರವೇಶಿಸುವುದು ನಿಷಿದ್ಧವೆಂದು ನಾವು ಭಾವಿಸಿದ್ದೆವು. ಆದರೆ ಇಲ್ಲಿ ನಮ್ಮನ್ನು ಆದರ ಪೂರ್ವಕ ಸ್ವಾಗತಿಸಲಾಯಿತಲ್ಲದೆ ನಮಾಝ್ ಮತ್ತು ಖುತ್‌ಬದಲ್ಲಿ ಸೇರಿ ನಮಗೆ ಹೃತ್ಪೂರ್ವಕ ಸಂತೋಷವಾಯಿತು. ಇಸ್ಲಾಮಿನ ಬಗ್ಗೆ ನಮ್ಮ ಅಭಿಪ್ರಾಯ ಬದಲಾಯಿಸಿತು.

* ಸಿಟಿ ಪಾರ್ಲಿಮೆಂಟಿನ ಸದಸ್ಯ ಹೇಳುತ್ತಾರೆ: ನಮ್ಮ ಪ್ರದೇಶದಲ್ಲಿ ಮಸ್‌ಜಿದ್ ನಿರ್ಮಾಣವನ್ನು ನಾವು ಸ್ವಾಗತಿಸುತ್ತೇವೆ. ಅಹ್ಮದಿಯಾ ಜಮಾಅತಿನ ನಿಲುವಿನ ಪ್ರಕಾರ ಈ ಮಸ್‌ಜಿದ್ ಮಾನವೀಯತೆಯನ್ನು ಪ್ರೀತಿಸುವವರ ಮತ್ತು ಸಮಾಜ ಸೇವೆಯಲ್ಲಿ ವಿಶ್ವಾಸ ಹೊಂದಿದವರ ಕೇಂದ್ರವಾಗುವುದು ಎಂದು ನಾನು ಹಾರೈಸುತ್ತೇನೆ.

* ಇಶಿನೋಮಾಕಿ ನಗರದ ಪಾರ್ಲಿಮೆಂಟ್ ಸದಸ್ಯರು ಒಂದು ಸಾವಿರ ಕಿಲೋಮೀಟರ್ ಪ್ರಯಾಣ ಮಾಡಿ ಮಸ್‌ಜಿದ್ ಉದ್ಘಾಟನೆಯಲ್ಲಿ ಭಾಗವಹಿಸಲು ಆಗಮಿಸಿದ್ದರು. ಅವರು ಹೇಳಿದರು: ಈ ಸುಂದರವಾದ ಮಸ್‌ಜಿದನ್ನು ನೋಡಿದಾಗ

ನನ್ನ ಪ್ರಯಾಣದ ಆಯಾಸ ಕೊನೆಗೊಂಡಿತು. ಅಹ್ಮದಿಯಾ ಜಮಾಅತ್ ಭೂಕಂಪ ಪೀಡಿತರಿಗೆ ನೆರವು ನೀಡಿ ಒಳ್ಳೆಯ ಪ್ರಸಿದ್ಧಿ ಪಡೆದಿದೆ. ಈ ಒಳ್ಳೆಯ ಪ್ರಸಿದ್ಧಿಯನ್ನು ವರ್ಧಿಸಲು ಈ ಮಸ್‌ಜಿದ್ ಕಾರಣವಾಗುವುದು ಎಂದು ಪ್ರತೀಕ್ಷಿಸುತ್ತೇನೆ.

* ಏಚಿ ಎಜುಕೇಶನಲ್ ಯುನಿವರ್ಸಿಟಿಯ ಪ್ರೊಫೆಸರ್ ಮಿನೆಸಾಕಿ ಹಿರೋಕೋ ಹೀಗೆ ಹೇಳಿದರು: ಜಪಾನಿನಲ್ಲಿ ಅಹ್ಮದಿಯಾ ಜಮಾಅತಿನ ಮಸ್‌ಜಿದನ್ನು ನಿರ್ಮಿಸುವುದು ಬಹಳ ಆವಶ್ಯಕವಾಗಿತ್ತು. ಲೋಕಕ್ಕೆ ಇಸ್ಲಾಮಿನ ಸುಂದರ ಮುಖವನ್ನು ತೋರಿಸುವುದರಲ್ಲಿ ಅಹ್ಮದಿಯಾ ಜಮಾಅತಿನ ಕೆಲಸ ಬಹಳ ಎದ್ದು ಕಾಣುವಂತಹದಾಗಿದೆ. ಈ ಮಸ್‌ಜಿದ್ ಮೂಲಕ ಅಹ್ಮದಿಯಾ ಜಮಾಅತಿನ ಬಗ್ಗೆ ಪರಿಚಯ ಇನ್ನಷ್ಟು ಹೆಚ್ಚಾಗುವುದು ಎಂದೂ ಲೋಕದಲ್ಲಿ ವಾಸ್ತವಿಕ ಶಾಂತಿ ಸಮಾಧಾನಗಳು ಹರಡುವುದೆಂದೂ ನಾವು ಪ್ರತೀಕ್ಷಿಸುತ್ತೇವೆ.

ಶನಿವಾರ ಸಾಯಂಕಾಲ ಅಲ್ಲಿ ಒಂದು ಸ್ವಾಗತ ಸಮಾರಂಭ, ಮಸ್‌ಜಿದ್‌ಗೆ ಸಂಬಂಧಿಸಿ ಮಸ್‌ಜಿದ್‌ನ ಅಂಗಳದಲ್ಲಿ ಜರಗಿತು. ಅದರಲ್ಲಿ 109 ಜಪಾನಿ ಅತಿಥಿಗಳು ಎಂಟು ಜನ ವಿದೇಶೀ ಜಮಾಅತೇತರ ಅತಿಥಿಗಳು ಸೇರಿದ್ದರು. ಈ ಅತಿಥಿಗಳಲ್ಲಿ ಎ.ಎಂ.ಎ. ಸಿಟಿ ಇಂಟರ್‌ನೇಶನಲ್ ಎಸೋಸಿಯೇಶನಿನ ಅಧ್ಯಕ್ಷರು, ಪಾರ್ಲಿಮೆಂಟ್ ಸದಸ್ಯರು, ಸಿಟಿ ಪಾರ್ಲಿಮೆಂಟ್ ಸದಸ್ಯರು, ಡೈರೆಕ್ಟರ್ ಆಫ್ ಇಂಟರ್‌ನೇಶನಲ್ ಟೂರಿಸಮ್, ಸೋಟೋ ಟೆಂಪಲ್‌ನ ಅಧ್ಯಕ್ಷರು ಮತ್ತು ಪ್ರೀಸ್ಟ್, ಪ್ರೊಫೆಸರ್‌ಗಳು, ಡಾಕ್ಟರ್‌ಗಳು, ಟೀಚರ್‌ಗಳು, ವಕೀಲರು ಮತ್ತು ಬೇರೆ ವಿಭಾಗದ ಗಣ್ಯ ವ್ಯಕ್ತಿಗಳು ಸೇರಿದ್ದರು.

* ಈ ಸಮಾರಂಭಕ್ಕೆ ಬಂದ ಒಬ್ಬ ಬೌದ್ಧ ಸನ್ಯಾಸಿ ಹೇಳುತ್ತಾರೆ: ಅಹ್ಮದಿಯಾ ಜಮಾಅತಿನ ಇಮಾಮರು ಬಹಳ ಒಳ್ಳೆಯ ಸಂದರ್ಭದಲ್ಲಿ ಆಗಮಿಸಿದ್ದಾರೆ. ಪ್ಯಾರಿಸ್ ಸಂಭವದ ನಂತರ ನಾವು ಗಾಬರಿಗೊಂಡಿದ್ದೆವು. ಇಮಾಮರು ಬಹಳ ಸುಂದರವಾಗಿಯೂ ಸರಳವಾಗಿಯೂ ಮಾತನಾಡಿ ಇಸ್ಲಾಮ್ ಧರ್ಮದ ಬಗ್ಗೆ ವಿವರಿಸಿದ ಕಾರಣ ನಮ್ಮ ಗಾಬರಿ ದೂರವಾಯಿತು. ಇಸ್ಲಾಮ್ ಧರ್ಮದ ಬಗ್ಗೆ ಇದ್ದ ನಮ್ಮ ಭಯ ದೂರ ಸರಿಯಿತು. ಅಹ್ಮದಿಯಾ ಜಮಾಅತಿನ ಇಮಾಮರ ಆಗಮನ ಮತ್ತು ಈ ಮಸ್‌ಜಿದ್ ನಿರ್ಮಾಣ ನಮ್ಮ ಆತಂಕಗಳನ್ನು ನಿವಾರಣೆ ಮಾಡಿದೆ.

* ಓರ್ವ ವಕೀಲರಾದ ಇಟೋ ಹಿರೋಶಿ ಎಂಬವರು ನಮಗೆ ವಿವಿಧ ಸಂದರ್ಭಗಳಲ್ಲಿ ಕಾನೂನಿನ ಸಲಹೆ ನೀಡಿದ್ದರು. ಅವರು ಹೇಳುತ್ತಾರೆ: ಇದು ನನ್ನ ಜೀವಿತದ ಅತ್ಯುತ್ತಮ ದಿನವಾಗಿದೆ. ಅಹ್ಮದಿಯಾ ಜಮಾಅತಿನ ಇಮಾಮರ ಮಾತುಗಳು ಸತ್ಯವಾಗಿದ್ದುವು. ಅವರು ಶಾಂತಿ ಮತ್ತು ಮೃದುತ್ವದ ಬಗ್ಗೆ ಮಾತನಾಡಿದರಲ್ಲದೆ ನ್ಯಾಯಪಾಲನೆ ಬಗ್ಗೆ ಸಹ ಒತ್ತಿ ಹೇಳಿದರು. ಇದು ಬಹಳ ಒಳ್ಳೆಯ ಮತ್ತು ಆವಶ್ಯಕವಾದ ವಿಷಯವಾಗಿದೆ.

* ಒಂದು ಯುನಿವರ್ಸಿಟಿಯ ಓರ್ವ ವಿದ್ಯಾರ್ಥಿ ಹೇಳಿದರು: ನನ್ನ ಮನೆ ಬೌದ್ಧ ಪುರೋಹಿತರ ಮನೆಯಾಗಿದೆ. ನನ್ನ ಮನೆ ಟೆಂಪಲ್ ಸಹ ಆಗಿದೆ. ನನಗೆ ಇಸ್ಲಾಮ್ ಬಗ್ಗೆ ತಿಳಿಯಲು ಆಸಕ್ತಿ ಇತ್ತು. ಆದರೆ ಮುಸ್ಲಿಮರೊಂದಿಗೆ ಮಾತನಾಡುವ ಸಂದರ್ಭ ಸಿಕ್ಕಿರಲಿಲ್ಲ. ಪುಸ್ತಕಗಳಿಂದ ಓದಿ ತಿಳಿದಿದ್ದೆ. ಈಗ ಮಸ್‌ಜಿದ್ ಉದ್ಘಾಟನೆಯಲ್ಲಿ ಭಾಗವಹಿಸಿ ಅಹ್ಮದಿಯಾ ಜಮಾಅತಿನ ಇಮಾಮರ ಮಾತುಗಳನ್ನು ಆಲಿಸಿ ಇಸ್ಲಾಮಿನ ವಾಸ್ತವಿಕ ಚಿತ್ರ ನನಗೆ ಕಾಣಿಸಿತು. ನನ್ನ ಜೀವಿತದಲ್ಲಿ ಹೊಸ ಅಧ್ಯಾಯ ಪ್ರಾರಂಭವಾಯಿತು.

* ಒಬ್ಬ ಮಹಿಳೆ ಯೂಕಿ ಸಂಗ್ ಸಾಕಿ ಹೇಳುತ್ತಾರೆ: ಈ ಗಂಭೀರ ಸಮಾರಂಭಕ್ಕೆ ಆಮಂತ್ರಿಸಿದುದಕ್ಕೆ ಹೃತ್ಪೂರ್ವಕ ಕೃತಜ್ಞತೆ ಅರ್ಪಿಸುತ್ತೇನೆ. ಈ ನಗರದಲ್ಲಿ ಇಷ್ಟು ಭವ್ಯ ಮಸ್‌ಜಿದ್ ನಿರ್ಮಿಸಲ್ಪಟ್ಟದ್ದು ನಮಗೆ ಬಹಳ ಸಂತೋಷಕರವಾಗಿದೆ. ನಾನು ಯುನಿವರ್ಸಿಟಿಯ ವಿದ್ಯಾರ್ಥಿನಿಯಾಗಿದ್ದೇನೆ. ವಿವಿಧ ಧರ್ಮಗಳ ಬಗ್ಗೆ ಸಂಶೋಧನೆ ನಡೆಸುತ್ತಿದ್ದೇನೆ. ಈ ಸಮಾರಂಭದಲ್ಲಿ ಭಾಗವಹಿಸಿದ ನಂತರ ನನಗೆ ತಿಳಿಯಿತು– ಇಸ್ಲಾಮಿನ ಬಗ್ಗೆ ನನ್ನ ಜ್ಞಾನ ಬಹಳ ಕಡಿಮೆ ಇದೆ ಎಂದು. ಆ ಕಾರಣದಿಂದ ನಾವು ತಪ್ಪು ಗ್ರಹಿಕೆಗೆ ಗುರಿಯಾಗುತ್ತೇವೆ. ಅಹ್ಮದಿಯಾ ಜಮಾಅತಿನ ಇಮಾಮರ ಭಾಷಣ ಈ ಕಾಲಘಟ್ಟಕ್ಕೆ ಆವಶ್ಯಕವಾಗಿದೆ. ಈ ಭಾಷಣದಿಂದ ನಾನು ಇಸ್ಲಾಮಿನ ಬಗ್ಗೆ ಬಹಳ ಅರಿವು ಗಳಿಸಿದೆನು. ಜಪಾನಿಯರಾದ ನಮಗೆ ಇಸ್ಲಾಮ್ ಬಗ್ಗೆ ಹೆಚ್ಚಿಗೆ ಮಾಹಿತಿಯೇನೂ ಇಲ್ಲ. ನಾವು ಇಸ್ಲಾಮ್ ಬಗ್ಗೆ ಭಯಭೀತರಾಗಿದ್ದೇವೆ. ಆದರೆ ಇಂದಿನ ಭಾಷಣದಿಂದ ಇಸ್ಲಾಮ್ ವಾಸ್ತವಿಕವಾಗಿ ಏನೆಂದು ನಮಗೆ ತಿಳಿಯಿತು. ಮಸ್‌ಜಿದ್ ನಿರ್ಮಾಣದ ನಂತರ ಇಂತಹ ಸಂದರ್ಭಗಳು ಇನ್ನಷ್ಟು ಉಂಟಾಗುವುವು ಎಂದು ನಾನು ಭಾವಿಸುತ್ತೇನೆ. ಅಹ್ಮದಿಯಾ ಜಮಾಅತಿನ ಇಮಾಮರನ್ನೂ ಜಮಾಅತಿನ ಸದಸ್ಯರನ್ನೂ ಭೇಟಿಯಾಗುವ ಸಂದರ್ಭ ಲಭಿಸಿತು. ಪರಸ್ಪರ ಪ್ರೀತಿ ಮತ್ತು ಶಾಂತಿ ಸಮಾಧಾನಗಳು ಅವರ ಮುಖಭಾವದಿಂದ ಕಾಣಿಸುತ್ತವೆ. ಅವರನ್ನು ಭೇಟಿಯಾದ ನಂತರ ಅವರಲ್ಲಿ ಬಹಳ ಪ್ರೀತಿಯನ್ನು ನಾನು ಕಂಡೆನು.

* ಒಬ್ಬ ಜಪಾನಿ, ಟೋಯಾ ಸಾಕುರಾಯ್ ಹೇಳುತ್ತಾರೆ: ಈ ದಿನದ ಸಮಾರಂಭದಲ್ಲಿ ಭಾಗವಹಿಸಿ, ಅಹ್ಮದಿಯಾ ಜಮಾಅತಿನ ಇಮಾಮರ ಭಾಷಣ ಆಲಿಸಿ ಲೋಕದಲ್ಲಿ ಶಾಂತಿಯ ಬಗ್ಗೆ ಯೋಚಿಸಲು ಸಂದರ್ಭ ಲಭಿಸಿತು. ಈ ಸಂದರ್ಭ ಒದಗಿಸಿದಕ್ಕೋಸ್ಕರ ನಾನು ಹೃತ್ಪೂರ್ವಕ ಕೃತಜ್ಞತೆ ಅರ್ಪಿಸುತ್ತೇನೆ. ಇಮಾಮರು ಕೇವಲ ಶಾಂತಿಯ ಬಗ್ಗೆ ಮಾತ್ರವಲ್ಲ ಲೋಕಕ್ಕೆ ಸಂಭವಿಸಲಿರುವ ರಹಸ್ಯ ಅಪಾಯಗಳ ಬಗ್ಗೆ ಸಹ ಮಾತನಾಡಿದರು. ಮುಸ್ಲಿಮರು ಲೋಕವನ್ನು ಸ್ವಾಧೀನಪಡಿಸಲು ಇಚ್ಛಿಸುತ್ತಾರೆಂಬ ನಮ್ಮ ಭಯಗಳನ್ನು ಸಹ ಅಹ್ಮದಿಯಾ ಜಮಾಅತಿನ ಖಲೀಫರು ದೂರ ಸರಿಸಿದರು. ನಾವು ಸಹ ಅವರ ಜೊತೆಗೆ ಸೇರಿ ಕೊಂಡು ಶಾಂತಿಗೋಸ್ಕರ ಕೆಲಸ ಮಾಡಬೇಕೆಂದು ನಾನು ಪದೇ ಪದೇ ಹೇಳುತ್ತೇನೆ. ನಾವು ಇಸ್ಲಾಮಿನ ಬಗ್ಗೆ ಓದಿ ಅದನ್ನು ಮನವರಿಕೆ ಮಾಡಿಕೊಳ್ಳಬೇಕಾದುದು ಆವಶ್ಯಕವಾಗಿದೆ.

* ಒಬ್ಬ ಜಪಾನಿ ಅಧ್ಯಾಪಕ ಹೀಗೆ ಹೇಳಿದರು: ಅಹ್ಮದಿಯಾ ಜಮಾಅತಿನ ಸದಸ್ಯರು ಕಷ್ಟಕಾಲದಲ್ಲಿ ಯಾವಾಗಲೂ ನಮಗೆ ಸಹಾಯ ನೀಡಿದ್ದಾರೆ. ಈ ವಿಷಯ ನನಗೆ ಮೊದಲು ತಿಳಿದಿರಲಿಲ್ಲ. ಇಲ್ಲಿ ಮಾತನಾಡಿದ ಹಲವು ಭಾಷಣಕಾರರಿಂದ ನನಗೆ ತಿಳಿಯಿತು– ವಿವಿಧ ಭೂಕಂಪಗಳ ಕಾಲದಲ್ಲಿ ಮತ್ತು ಸುನಾಮಿ ಕಾಲದಲ್ಲಿ ಅಹ್ಮದಿಯಾ ಜಮಾಅತ್ ತುಂಬಾ ನೆರವು ನೀಡಿದೆ ಎಂದು. ಇನ್ನು ನನ್ನ ಶಾಲೆಯ ಮಕ್ಕಳಿಗೆ ಈ ಜನರು ಅಪಾಯಕಾರಿಗಳಲ್ಲ ಎಂದು ನಾನು ಹೇಳಿಕೊಡುವೆನು. ಜಮಾಅತಿನ ಖಲೀಫರು ಬಹಳ ಸರಳ ರೀತಿಯಲ್ಲಿ ಇಸ್ಲಾಮ್ ಬಗ್ಗೆ ವಿವರಿಸಿದರು. ಅವರ ಮಾತುಗಳು ಬೇಗನೆ ಮನವರಿಕೆ ಆಗುವ ರೀತಿಯಲ್ಲಿತ್ತು.

* ಇನ್ನೊಬ್ಬರು ಹೇಳಿದರು: ಈ ಸಮಾರಂಭದಲ್ಲಿ ಭಾಗವಹಿಸಿ ಅಹ್ಮದಿಯಾ ಜಮಾಅತಿನ ಇಮಾಮರ ಭಾಷಣ ಆಲಿಸಿದ ನಂತರ ನನಗೆ ತಿಳಿಯಿತು– ನಮಗೆ ಇಸ್ಲಾಮಿನ ಮೂಲ ತತ್ವಗಳನ್ನು ತಿಳಿದುಕೊಳ್ಳುವ ಆವಶ್ಯಕತೆ ಇದೆ ಎಂದು. ಜಪಾನ್ ಒಂದು ದ್ವೀಪ ರಾಷ್ಟ್ರವಾಗಿದೆ. ಇಲ್ಲಿನ ಜನರು ಹೊರ ಲೋಕದಿಂದ ದೂರವಿದ್ದು ಮಾಹಿತಿಯಿಲ್ಲದವರಾಗಿದ್ದಾರೆ. ಅವರು ಇಸ್ಲಾಮ್ ಬಗ್ಗೆ ಭೀಕರವಾದ ಕಲ್ಪನೆಯಿಂದ ಮುಂದೆ ಸಾಗಲು ಪ್ರಯತ್ನಿಸಿಲ್ಲ. ಅಹ್ಮದಿಯಾ ಜಮಾಅತಿನ ಇಮಾಮರ ಆಗಮನ, ಈ ಮಸ್‌ಜಿದ್‌ನ ನಿರ್ಮಾಣ ಈ ಕಲ್ಪನೆ ಉತ್ತಮವಾಗಿ ಬದಲಾಯಿಸುವ ಮಾರ್ಗವಾಗುವುದು ಎಂದು ನಾನು ಭಾವಿಸುತ್ತೇನೆ.

* ಒಬ್ಬ ವಿದ್ಯಾರ್ಥಿ ಹೇಳಿದರು: ಅಹ್ಮದಿಯಾ ಜಮಾಅತಿನ ಇಮಾಮರ ಭಾಷಣ ಆಲಿಸಿ ನಾನು ಬಹಳ ಬಾವಪರವಶನಾದೆನು. ಅವರ ಮಾತುಗಳು ಹೃದಯವನ್ನು ಬದಲಾಯಿಸುವಂತಹದು ಎಂಬುದರ ಬಗ್ಗೆ ಸಂಶಯವಿಲ್ಲ. ಅಹ್ಮದಿಯಾ ಜಮಾಅತಿನ ಇಮಾಮರು ಹೇಳಿದರು ಭೀಕರವಾದಿಗಳು ಬಹಳ ಕೆಟ್ಟ ಕೆಲಸ ಮಾಡುತ್ತಿದ್ದಾರೆ. ಆದರೆ ಇಸ್ಲಾಮಿನ ಮೂಲ ತತ್ವಗಳು ಬಹಳ ಉತ್ತಮವಾಗಿವೆ. ಆದುದರಿಂದ ಸಂಪರ್ಕ ಮಾಧ್ಯಮಗಳು ಇಸ್ಲಾಮಿನ ಬಗ್ಗೆ ನೀಡುವ ವಿವರಣೆಗಳು ವಾಸ್ತವಿಕತೆಗಿಂತ ಭಿನ್ನವಾಗಿದೆ.

ಅಲ್ಲಾಹನ ಅನುಗ್ರಹದಿಂದ ಸಂಪರ್ಕ ಮಾಧ್ಯಮಗಳ ಮೂಲಕ ಮಸ್‌ಜಿದ್ ಉದ್ಘಾಟನೆಯ ಬಗ್ಗೆ ಬಹಳ ಚರ್ಚೆ ನಡೆಯಿತು. ಜಪಾನಿಯರಿಗೆ ಬಹಳ ವ್ಯಾಪಕವಾಗಿ ಇಸ್ಲಾಮಿನ ಸಂದೇಶ ತಲಪಿತು. ಮೀಡಿಯಾಗಳು ನನ್ನ ನಾಲ್ಕು ಸಂದರ್ಶನಗಳನ್ನು ಮಾಡಿತು. ಮೂರು ಈ ಮಸ್‌ಜಿದ್‌ಗೋಸ್ಕರ ಇನ್ನೊಂದು ಟೋಕಿಯೋದಲ್ಲಿ. ಮಸ್‌ಜಿದ್ ಉದ್ಘಾಟನೆಗೆ ಐದು ಟಿ.ವಿ. ಚ್ಯಾನಲ್ ಮತ್ತು

ವಿವಿಧ ಪತ್ರಿಕೆಗಳ ಪ್ರತಿನಿಧಿಗಳು ಮತ್ತು ಜರ್ನಲಿಸ್ಟ್‌ಗಳು ಆಗಮಿಸಿದ್ದರು. ಅಲ್ಲಾಹನ ಅನುಗ್ರಹದಿಂದ ಪತ್ರಿಕೆಗಳ ಮೂಲಕ ಸಹ ಬಹಳ ಪ್ರಚಾರ ನಡೆಯಿತು.

ಟಿ.ವಿ. ಚ್ಯಾನಲ್‌ಗಳು, ಪತ್ರಿಕೆಗಳು, ಇಂಟರ್‌ನೆಟ್, ವೆಬ್‌ಸೈಟ್ ಮೂಲಕ ಮಸ್‌ಜಿದ್ ಉದ್ಘಾಟನೆಯ ಸಂದರ್ಭದಲ್ಲಿ ಪ್ರಕಟವಾದ ಸಮಾಚಾರಗಳು ಐದು ಕೋಟಿ ಇಪ್ಪತ್ತು ಲಕ್ಷ ಜನರಿಗೆ ಇಸ್ಲಾಮಿನ ಸಂದೇಶವನ್ನು ತಲಪಿಸಿತು. ಇವು ಮಸ್‌ಜಿದ್ ಮೂಲಕ ಇಸ್ಲಾಮಿನ ವಾಸ್ತವಿಕ ಸಂದೇಶ ತಲಪಿಸುವ ಕಾರಣದಿಂದ ನಮಗೆ ದೊರೆತ ಅಲ್ಲಾಹನ ಬೆಂಬಲ ಮತ್ತು ನೆರವುಗಳ ದೃಶ್ಯಗಳಾಗಿವೆ.

ಟೋಕಿಯೋದಲ್ಲಿ ಒಂದು ಸಮಾರಂಭವಿತ್ತು. ಅದರಲ್ಲಿ 63 ಜಪಾನಿ ಅತಿಥಿಗಳು ಭಾಗವಹಿಸಿದರು. ಅದರಲ್ಲಿ ಬೌದ್ಧ ಪಂಥದ ಓರ್ವ ಮುಖ್ಯ ಪುರೋಹಿತ ಭಾಗವಹಿಸಿದ್ದರು. ಟಿಹೋನ್ ಯುನಿವರ್ಸಿಟಿಯ ಚಾನ್ಸಿಲರ್ ಸಹ ಇದ್ದರು. ಪ್ರಸಿದ್ಧ ಕವಿಯೂ ಓರ್ವ ಬಿಸಿನೆಸ್ ಸಲಹೆಗಾರನೂ ಆದ ಮಿಸ್ಟರ್ ಮಾರ್ಟಿನ್ ಸಹ ಬಂದಿದ್ದರು. ಜಪಾನಿನ ಎರಡನೆಯ ದೊಡ್ಡ ಪತ್ರಿಕೆ 'ಅಸಾಯಿ'ಯ ಚೀಫ್ ರಿಪೋರ್ಟರ್ ಸಹ ಬಂದಿದ್ದರು. ಅದೇ ರೀತಿ ವಿವಿಧ ಮಂಡಲದ ಪ್ರಸಿದ್ಧ ವ್ಯಕ್ತಿಗಳೂ ಇದ್ದರು. ಟಿಹೋನ್ ಯುನಿವರ್ಸಿಟಿಯ ಚಾನ್ಸಿಲರ್ ಹೇಳಿದರು: ನೀವು ನಮಗೆ ಏನು ಹೇಳಿ ಕೊಡುವಿರಿ ಎಂದು ನಾನು ಯೋಚಿಸುತ್ತಾ ಇದ್ದೆ. ಆದರೆ ನೀವು ಇಪ್ಪತ್ತು ನಿಮಿಷಗಳಲ್ಲಿ ಹಿಂದಿನ ಕಾಲದ ಚರಿತ್ರೆ ಮತ್ತು ಮುಂದಿನ ಸ್ಥಿತಿಯನ್ನು ಸಮಗ್ರವಾಗಿ ವಿಶ್ಲೇಷಿಸಿದಿರಿ. ನೀವು ವಾಸ್ತವಿಕ ವಿವರಣೆಗಳನ್ನು ನೀಡಿದಿರಿ. ಯುದ್ಧಗಳ ಹಾನಿಯ ಬಗ್ಗೆ ಮಾತನಾಡಿದಿರಿ. ಮುಂದೆ ಯುದ್ಧಗಳಿಂದ ರಕ್ಷಣೆ ಪಡೆಯಲು ಎಚ್ಚರಿಸಿದಿರಿ. ಅತ್ಯಂತ ಸ್ವಲ್ಪ ಸಮಯದಲ್ಲಿ ನೀವು ಇಸ್ಲಾಮ್ ಧರ್ಮದ ಬೋಧನೆಗಳನ್ನು ಸಹ ವಿವರಿಸಿದಿರಿ. ಅವರು ನನ್ನ ಭಾಷಣವನ್ನು ಇಂಗ್ಲಿಷ್‌ನಲ್ಲೂ ಜಪಾನಿ ಭಾಷೆಯಲ್ಲೂ ಮುದ್ರಿಸಿ ಜಪಾನಿನಲ್ಲಿಡೀ ಹಂಚಬೇಕೆಂದು ಹೇಳಿದರು.

ಒಬ್ಬರು ವಾಣಿಜ್ಯ ಸಲಹೆಗಾರ ಮತ್ತು ಕವಿ ಆಗಿದ್ದ ಮಾನ್ಯ ವ್ಯಕ್ತಿ ಇದ್ದರು. ಅವರು ಒಂದು ಪುಸ್ತಕ ಬರೆದಿದ್ದರು ಶಾಂತಿಯ ಬಗ್ಗೆ. ಅವರು ಹೇಳಿದರು: ನಾನು ಬರೆದುದಕ್ಕೆ ನೀವು ಅಂಗೀಕಾರದ ಮುದ್ರೆ ಒತ್ತಿದಿರಿ.

ಒಟ್ಟಿನಲ್ಲಿ ಅಲ್ಲಾಹನ ಅನುಗ್ರಹದಿಂದ ಮಸ್‌ಜಿದ್ ಉದ್ಘಾಟನೆ ಮತ್ತು ನನ್ನ ಪ್ರಯಾಣ ಬಹಳ ಉತ್ತಮ ಪರಿಣಾಮವನ್ನು ತಂದಿದೆ. ಮಸ್‌ಜಿದ್ ಕಾರಣದಿಂದ ಜಮಾಅತಿನ ಬಗ್ಗೆ ಉಂಟಾದ ಪರಿಚಯವನ್ನು ವಿಶಾಲಗೊಳಿಸಲು ಅಲ್ಲಿನ ಜಮಾಅತ್‌ಗೆ ಅಲ್ಲಾಹನು ತೌಫೀಕ್ ನೀಡಲಿ. ಜಮಾಅತಿನ ಬಗ್ಗೆ ಜಪಾನಿಯರಿಗಿರುವ ಪ್ರತೀಕ್ಷೆ ಈಡೇರುವಂತಾಗಲಿ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಅಪೇಕ್ಷೆ ಪ್ರಕಾರ ಅಲ್ಲಿ ಅಹ್ಮದಿಯತ್ತಿನ ಸಂದೇಶವನ್ನು ಬೇಗನೆ ಹಬ್ಬಿಸಲು ಪ್ರಯತ್ನಿಸುವಂತೆ ಅಲ್ಲಿನ ಅಹ್ಮದಿಯರಿಗೆ ಅಲ್ಲಾಹನು ಸೌಭಾಗ್ಯ ಒದಗಿಸಿ ಕೊಡಲಿ.

ಪಾಕಿಸ್ತಾನದಲ್ಲಿ ಮೌಲವಿಗಳ ಅಸೂಯೆ ಮತ್ತು ದ್ವೇಷ ಆಗಾಗ ಪ್ರಕಟವಾಗುತ್ತಾ ಇರುತ್ತದೆ. ಜಮಾಅತಿನ ಅಭಿವೃದ್ಧಿ ಕಂಡು ಅವರ ಅಸೂಯೆಯ ಅಗ್ನಿ ಉತ್ತೇಜಿಸಲ್ಪಡುತ್ತದೆ. ಅಲ್ಲಿ ಝೀಲಮ್‌ನಲ್ಲಿ ಮೌಲವಿಗಳಿಂದ ಮತ್ತು ಉಗ್ರಗಾಮಿಗಳಿಂದ ಒಂದು ದೌರ್ಜನ್ಯ ನಡೆಯಿತು. ಅಹ್ಮದಿಯರ ಒಂದು ಚಿಪ್ ಬೋರ್ಡ್ ಫ್ಯಾಕ್ಟರಿಗೆ ಬೆಂಕಿ ಹಚ್ಚಲಾಯಿತು. ಅದರ ಮಾಲಿಕರನ್ನೂ ಅಹ್ಮದಿ ಕೆಲಸಗಾರರನ್ನೂ ಜೀವಂತ ಸುಡುವ ಉದ್ದೇಶ ಅವರಿಗಿತ್ತು. ಆದರೆ ಅಲ್ಲಾಹನ ಅನುಗ್ರಹದಿಂದ ಅವರು ಅದರಲ್ಲಿ ಜಯ ಗಳಿಸಲಿಲ್ಲ. ಆದರೆ ಅಪಾರವಾದ ಸಾಂಪತ್ತಿಕ ನಷ್ಟ ಸಂಭವಿಸಿತು.

1974ರಲ್ಲೂ ಈ ಜನರು ಬೆಂಕಿ ಹಾಕಿದ್ದರು. ಅಹ್ಮದಿಯರನ್ನು ಕಷ್ಟಕ್ಕೆ ಗುರಿಪಡಿಸಿದ್ದರು. ಆದರೆ ಈ ಜನರ ಪ್ರಯತ್ನಗಳು ಜಯಗಳಿಸಲಿಲ್ಲ. ಅವರ ಹೃದಯಗಳಲ್ಲಿ ಶೋಕ ಬಾಕಿಯಾಯಿತು. ಅಹ್ಮದಿಯರಿಗೆ ಭಿಕ್ಷಾಪಾತ್ರೆಯನ್ನು ಹಿಡಿಸಲು ಬಯಸಿದವರು ಭಿಕ್ಷೆ ಬೇಡುವುದನ್ನು ನಾವು ಕಂಡೆವು. ಅಲ್ಲಾಹನು ಅಹ್ಮದಿಯರೊಂದಿಗೆ ಹೀಗೆ ವರ್ತಿಸುತ್ತಾನೆ. ಈ ಪರೀಕ್ಷೆಗಳು ನಮ್ಮ ವಿಶ್ವಾಸವನ್ನು ಅಲುಗಾಡಿಸಲಾರದು. ಅದನ್ನು ಬಲ ಪಡಿಸುತ್ತದೆ.

ಈ ಚಿಪ್ ಬೋರ್ಡ್ ಫ್ಯಾಕ್ಟರಿ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹೇಬರ ಪುತ್ರ ಮಿರ್ಝಾ ಮುನೀರ್ ಅಹ್ಮದ್ ಸಾಹೇಬರದಾಗಿತ್ತು. ಅವರು ನಿಧನ ಹೊಂದಿದ ನಂತರ ಅವರ ಮಕ್ಕಳು ಮಾಲಕರಾಗಿದ್ದಾರೆ. ಅಲ್ಲಾಹನು ಅವರನ್ನೂ ಅವರ ಅಹ್ಮದಿ ಕೆಲಸಗಾರರನ್ನೂ ರಕ್ಷಿಸಿದನು. ಮಕ್ಕಳನ್ನೂ ಮಹಿಳೆಯರನ್ನೂ ರಕ್ಷಿಸಿದನು. ಅವರ ಗೌರವ ಕಾಪಾಡಿದನು. ಮಿರ್ಝಾ ಮುನೀರ್ ಅಹ್ಮದ್ ಸಾಹೇಬರ ಪುತ್ರ ಮಿರ್ಝಾ ನಸೀರ್ ಅಹ್ಮದ್ ಸಾಹೇಬ್ ಫ್ಯಾಕ್ಟರಿಯ ಒಳಗಿದ್ದರು. ಅವರ ಮನೆ ಸಹ ಅದರೊಳಗಿತ್ತು. ಅಲ್ಲಾಹನು ಎಲ್ಲರನ್ನೂ ರಕ್ಷಿಸಿದನು. ಅಲ್ಲಿದ್ದ ಕೆಲಸಗಾರರು ಅಲ್ಲಿಂದ ಓಡಿ ಅಡಗಿದ್ದರು. ನಂತರ ಅವರನ್ನು ಹುಡುಕಿ ಖುದ್ದಾಮ್ ಸುರಕ್ಷಿತ ಸ್ಥಳಕ್ಕೆ ತಲಪಿಸಿದರು.

ಫ್ಯಾಕ್ಟರಿಯ ಗೇಟಿನಲ್ಲಿ ಸೆಕ್ಯೂರಿಟಿಗಿದ್ದ ಖಮರ್ ಅಹ್ಮದ್ ಸಾಹಿಬರನ್ನು ಪೊಲೀಸರು ಬಂಧಿಸಿದ್ದಾರೆ. ಅವರ ಮೇಲೆ ಪವಿತ್ರ ಖುರ್‌ಆನನ್ನು ಅಪಮಾನಿಸಿದ ಆರೋಪ ಹೊರಿಸಲಾಗಿದೆ. ಅಲ್ಲಾಹನು ಅವರ ಬಿಡುಗಡೆ ಏರ್ಪಾಟು ಮಾಡುವಂತಾಗಲಿ.

ಮಿರ್ಝಾ ನಸೀರ್ ಅಹ್ಮದ್ ಸಾಹಿಬರ ಪತ್ನಿ ಮತ್ತು ಸೊಸೆ ಮತ್ತು ಮಕ್ಕಳು ತೋರಿಸಿದ ಸಹನೆ ಮತ್ತು ಕೃತಜ್ಞತೆ ಪ್ರಶಂಸನೀಯವಾಗಿದೆ. ಕೆಲವು ಅಹ್ಮದಿಯೇತರರು ಈ ದೌರ್ಜನ್ಯದ ವಿರುದ್ಧ ಧ್ವನಿಯೆತ್ತಿದ್ದಾರೆ. ಅಲ್ಲಿನ ಅಧಿಕಾರಿಗಳೂ ರಾಜಕಾರಣಿಗಳೂ ನ್ಯಾಯ ಪಾಲನೆ ಮಾಡುವ ಬಗ್ಗೆ ಟಿ.ವಿ.ಯಲ್ಲಿ ಹೇಳಿದ್ದಾರೆ.

ಫ್ಯಾಕ್ಟರಿಗೆ ಬೆಂಕಿ ಹಚ್ಚಿದ ನಂತರ ಅಕ್ರಮಿಗಳು ಅಲ್ಲಿ ಹತ್ತಿರವಿರುವ ಕಾಲಾ ಗೋಜ್ರ ಮತ್ತು ಮಹ್ಮೂದ ಎಂಬಲ್ಲಿನ ನಮ್ಮ ಮಸ್‌ಜಿದ್‌ಗಳನ್ನು ಆಕ್ರಮಿಸಿದ್ದಾರೆ. ಮಸ್‌ಜಿದ್‌ನಿಂದ ಚಾಪೆಗಳನ್ನು ಮತ್ತು ಇತರ ಸಾಧನಗಳನ್ನು ಹೊರಗೆಸೆದು ಬೆಂಕಿ ಹಚ್ಚಿದ್ದಾರೆ. ಅನಂತರ ಮಸ್‌ಜಿದ್ ಸ್ವಾಧೀನಪಡಿಸಿದ್ದಾರೆ. ಪೊಲೀಸರು ಅವರನ್ನು ಹೊರಹಾಕಿ ಮಸ್‌ಜಿದ್‌ಗಳಿಗೆ ಬೀಗ ಹಾಕಿದ್ದಾರೆ. ಅಲ್ಲಾಹನು ಅಲ್ಲಿನ ಎಲ್ಲ ಅಹ್ಮದಿಯರನ್ನು ಕಾಪಾಡಲಿ. ಪಾಕಿಸ್ತಾನದಲ್ಲಿ ನ್ಯಾಯ ಪಾಲನೆ ನಡೆಯುವಂತೆ ಅಲ್ಲಾಹನು ಮಾಡಲಿ. ಅಲ್ಲಿನ ಕೆಲಸಗಾರರಿಗೆ ಕೆಲಸವಿಲ್ಲವಾಗಿದೆ. ಅವರಿಗೆ ಕೆಲಸದ ಉತ್ತಮ ವ್ಯವಸ್ಥೆ ಉಂಟಾಗುವಂತೆ ಅಲ್ಲಾಹನು ಮಾಡಲಿ – ಆಮೀನ್.

———————*****———————


***Friday Sermon delivered by Hadrath Khaleefatul Masih Al Khamis***(atba)

*at Masjid Futhuh, London on 27-11-2015.*

**Summarized by** *Majlis Ansarullah Bharat*

***Kannada Translation**:* M. Ubeidullah for Kannada Desk, Qadian

***Reviewed by**:* M.P Ibrahim | ***Typing**:* U Basheer Ahmad

***Published By**:* Kannada Isha'at Team for Nazarath Nashr-O-Isha'ath, Qadian



***Email*:** *khutuba.kannada@gmail.com*



**You can find all the Sermons archived at**: www.alislam.org/friday-sermon